# ಹಸಿದ ಮುದುಕ ಮತ್ತು ಸುಮ್ಮನೆ ಕುಳಿತ ದೇವರು

■ ಗೌರಿ



‘ಸಿನಿಮಾಗೆ ಕಥೆ ಮುಖ್ಯವೇ?’

‘ಇದೆಂಥ ಪ್ರಶ್ನೆ? ಕಥೆ ಇಲ್ಲದ ಸಿನಿಮಾ ಒಂದು ಸಿನಿಮಾವೇ?’

ನಿಜವೇ. ಕಥೆ ಇಲ್ಲದ ಸಿನಿಮಾ ಗಟ್ಟಿ ಸಿನಿಮಾ ಆಗಲಾರದು. ಆದರೆ ಮೊದಲ ಪ್ರಶ್ನೆಯಲ್ಲಿನ ಧ್ವನಿ ಅಷ್ಟೇ ಅಲ್ಲ. ಯಾಕೆಂದರೆ ಕಥೆ ಹೇಳುವುದು ಸಿನಿಮಾದ ಉದ್ದೇಶ ಅಲ್ಲ, ಕಥೆ ಅಲ್ಲಿ ನೆಪವಷ್ಟೆ. ಅದನ್ನ ಬಳಸಿಕೊಂಡು ನೀವು ಕಟ್ಟಿಕೊಡುವ ಇಮೇಜ್‌ಗಳಲ್ಲಿ ಸಿನಿಮಾದ ಶಕ್ತಿ ಇದೆ ಎಂಬ ದೊಡ್ಡ ವಾದವೇ ಇದೆ. ಇದು ಬರೀ ಸಿನಿಮಾಗಷ್ಟೇ ಅನ್ವಯಿಸುವುದಲ್ಲ, ಎಲ್ಲ ರೀತಿಯ ಕಲಾಪ್ರಕಾರಗಳಿಗೂ ಅನ್ವಯಿಸುವ ಮಾತು.

ಕಥೆಯನ್ನು ಒಂದು ಸರಳರೇಖೆ ಎಂದು ಗ್ರಹಿಸಿದರೆ, ಈ ಜಗತ್ತಿನಲ್ಲಿ ಕೆಲವೇ ಕೆಲವು ಕಥೆಗಳಿವೆ. ಅವುಗಳನ್ನೇ ಬೇರೆ ಬೇರೆಯವರು, ಬೇರೆ ಬೇರೆ ರೀತಿಗಳಲ್ಲಿ ಹೇಳುತ್ತ ಬಂದಿದ್ದಾರೆ. ಆದರೂ ಕಥೆಗಳು ಇನ್ನೂ ಮುಗಿದಿಲ್ಲ. ಯಾಕೆ ಹಾಗೆ? ಯಾಕೆಂದರೆ ಅದೇ ಕಥೆಗಳು ಬೇರೆ ಬೇರೆ ಅನುಭವದ ಕುಲುಮೆಯಲ್ಲಿ ಬೆಂದು ಹದಗೊಂಡಾಗ ಅದರ ಧ್ವನಿಶಕ್ತಿಯೂ ಬೇರೆಯೇ ಆಗುತ್ತದೆ. ಹಳೆಯ ಕಥೆಯೇ ಹಲವು ಹೊಸ ಧ್ವನಿಗಳನ್ನು ಹೊರಡಿಸುತ್ತದೆ.

ಮರಾಠಿಯ ‘ಚೌಕಟ್’ ಎಂಬ ಕಿರುಚಿತ್ರ ಈ ಕಥನಮೀಮಾಂಸೆಯನ್ನು, ಸಿನಿಮಾ ಮೀಮಾಂಸೆಯನ್ನು ಒಟ್ಟಿಗೇ ಸೇರಿಸಿ ಅಚ್ಚುಮಾಡಿದ ಕಲಾಕೃತಿಯಂತಿದೆ. ‘ಒಬ್ಬ ಹಣ್ಣು ಹಣ್ಣು ಮುದುಕ ಅನ್ನ ಬೇಡಿಕೊಂಡು ಬರುತ್ತಾನೆ. ಆದರೆ ಆ ಮನೆಯ ಗೃಹಿಣಿ ದೇವರಿಗೆ ನೈವೇದ್ಯ ಮಾಡದೆ ಅಡುಗೆಯನ್ನು ಕೊಡಲಾರಳು. ಅವಳು ಮುಂದಿನ ಮನೆಗೆ ಹೋಗು ಎಂದು ಬೈದು ಒಳಹೋಗುತ್ತಾಳೆ. ಆದರೆ ಮುದುಕ ಕಾಯುತ್ತಾನೆ. ಗೃಹಿಣಿ ಅಸಹನೆಯಿಂದ ನಿನ್ನೆಯ ರೊಟ್ಟಿ, ತಂಗಳನ್ನ ತಂದು ಹಾಕುತ್ತಾಳೆ. ಅದನ್ನೇ ತಿಂದ ಮುದುಕ ಇಡೀ ಅಂಗಳವನ್ನು ಸ್ವಚ್ಛಗೊಳಿಸಿ ಹೊರಡುತ್ತಾನೆ’ – ಇದು ಕಥೆ. ಆದರೆ ಇದನ್ನು ಹೇಳಿದರೆ ‘ಚೌಕಟ್’ ಕಿರುಚಿತ್ರದ ಬಗ್ಗೆ ಏನೂ ಹೇಳಿದಂತಾಗುವುದಿಲ್ಲ. ಮೊದಲ ಶಾಟ್‌ನಿಂದ ಕೊನೆಯ ದೃಶ್ಯದವರೆಗೆ ಅದು ಕಟ್ಟಿಕೊಡುವ ಅನೂಹ್ಯ ಅನುಭವದ ಸನಿಹಕ್ಕೂ ಹೋದಂತಾಗುವುದಿಲ್ಲ. ಹಾಗಾದರೆ ಇಲ್ಲಿ ಉಲ್ಲೇಖಿಸಿದ ಕಥೆಯನ್ನು ಮೀರಿದ ಏನನ್ನು ಈ ಕಿರುಚಿತ್ರ ಕಟ್ಟಿಕೊಡುತ್ತಿದೆ? ಯಾವುದರ ಮೂಲಕ ಕಟ್ಟಿಕೊಡುತ್ತಿದೆ? ಈ ಪ್ರಶ್ನೆಗಳಿಗೆ ಉತ್ತರ ಸಿಗಬೇಕೆಂದರೆ ಕಿರುಚಿತ್ರವನ್ನು ನೋಡಲೇಬೇಕು.

ಕಿರುಚಿತ್ರವನ್ನು ಇಂಗ್ಲಿಷ್‌ನಲ್ಲಿ ಫ್ರೇಮ್ ಎನ್ನಬಹುದು. ಈ ಚಿತ್ರದ ಇಂಗ್ಲಿಷ್ ಟೈಟಲ್ ಕೂಡ ‘ಅ ಫ್ರೇಮ್’ ಎಂದೇ ಇದೆ. ಫ್ರೇಮ್ ಅನ್ನುವುದು ಈ ಚಿತ್ರದೊಳಗೆ ಬಾಗಿಲ ಚೌಕಟ್ಟಿಗೆ ಅನ್ವಯಿಸಬಹುದಾದರೂ, ಸಿನಿಮಾ ಪರಿಭಾಷೆಯಲ್ಲಿ ಫ್ರೇಮ್ ಅಂದರೆ ಒಂದು ದೃಶ್ಯವನ್ನು ಕ್ಯಾಮೆರಾ ತನ್ನ ಕಣ್ಣಲ್ಲಿ ಸೆರೆಹಿಡಿಯುವ ಚೌಕಟ್ಟು. ಆ ಪರಿಭಾಷೆಗೂ ಶೀರ್ಷಿಕೆ ಒಗ್ಗುವಂತೆಯೇ ಇದೆ. ಅರ್ಧ ಮುಚ್ಚಿದ ಬಾಗಿಲು, ಅಡುಗೆ ಮನೆಯೊಳಗಿನ ಕತ್ತಲು ಬೆಳಕಿನ ವಿನ್ಯಾಸ, ತೆರೆದ ಕಿಟಕಿ, ದೇವರ ಕೋಣೆಯಲ್ಲಿನ ಬೆಳಕಿನ ಹದ ಎಲ್ಲವನ್ನೂ ಈ ಕಿರುಚಿತ್ರ ಬರೀ ಚಂದದ ಚಿತ್ರಗಳಾಗಿ ಬಳಸಿಲ್ಲ. ಅನುಭವವನ್ನು ಉದ್ದೀಪಿಸುವ ಪರಿಕರವಾಗಿಯೂ ಬಳಸಿಕೊಂಡಿದೆ. ಹಾಗಾಗಿ ಚಿತ್ರದ ದೃಶ್ಯಗಳಿಗೆ ಚೌಕಟ್ಟು ಹಾಕುತ್ತಲೇ ನಮ್ಮ ಮನಸ್ಸಿಗೂ ಭಾವದ ಆವರಣವೊಂದನ್ನು ಕಟ್ಟಿಬಿಡುವಷ್ಟು ಶಕ್ತವಾಗಿದೆ. ಕೊನೆಯಲ್ಲಿ ತೆಗೆದುಕೊಳ್ಳುವ ಉಳಿದರ್ಧ ಬಾಗಿಲಿನ ರೂಪಕ ಇಡೀ ಕಥೆಯಲ್ಲಿ ತುಂಬ ಸಹಜವಾಗಿ ಬೆಳೆಯುತ್ತದೆ. ಗೃಹಿಣಿ ದೇವರ ಪೀಠದಲ್ಲಿದ್ದ ನೈವೇದ್ಯದ ತಟ್ಟೆಯನ್ನು ಮುದುಕನಿಗೆ ಕೊಡುವ ಸನ್ನಿವೇಶ ತೆರೆಯ ಮೇಲೆ ತೋರಿಸದೇ ಇರುವುದು ನಿರ್ದೇಶಕರ ಜಾಣ್ಮೆಯನ್ನಷ್ಟೇ ಅಲ್ಲ, ನೋಡುಗರ ಮೇಲೆ ಅವರಿಗೆ ಇರುವ ಗಾಢ ನಂಬಿಕೆಯನ್ನೂ ಸೂಚಿಸುವಂತಿದೆ.

ಕೌಶಲದ ದೃಷ್ಟಿಯಿಂದ, ತಾಂತ್ರಿಕತೆಯ ದೃಷ್ಟಿಯಿಂದ, ನಟನೆಯ ದೃಷ್ಟಿಯಿಂದಷ್ಟೇ ಅಲ್ಲ, ದರ್ಶನದ ದೃಷ್ಟಿಯಿಂದಲೂ ‘ಚೌಕಟ್’, ತನ್ನ ಸುತ್ತಲೂ ಚೆನ್ನದ ಚೌಕಟ್ಟನ್ನು ಕಟ್ಟಿಕೊಂಡು ಬಹುಕಾಲ ಉಳಿಯುವಂಥ ಕಿರುಚಿತ್ರ. ■

ಈ ಕಿರುಚಿತ್ರ ವೀಕ್ಷಣೆಗೆ
bit.ly/3t2VvHy
ಕೊಂಡಿ/ಕ್ಯೂಆರ್
ಕೋಡ್ ಸ್ಕ್ಯಾನ್ ಮಾಡಿ.

**ಹೆಸರು:** ಚೌಕಟ್
**ನಿರ್ದೇಶನ:** ಉಮೇಶ್ ಬಾಗಡೆ
**ನಿರ್ಮಾಣ:** ಸೌರಭ್ ಪ್ರಭುದೇಸಾಯಿ
**ಛಾಯಾಗ್ರಹಣ:** ಅಭಿಷೇಕ್ ಸೆಟೆ
**ಸಂಗೀತ:** ಐಶ್ವರ್ಯಾ ಮಲ್ಗಾವೆ
**ತಾರಾಗಣ:** ಕೋಮಲ್ ಆಪಕೆ, ವಿಜಯ ಪವಾರ್